## ವರ್ಣಮಾಲೆ

ಕನ್ನಡದಲ್ಲಿ ಒಟ್ಟು ೪೯(49)ಅಕ್ಷರಗಳಿವೆಇವುಗಳನ್ನು ವರ್ಣಗಳೆಂದು
ಕರೆಯುತ್ತಾರೆ ಈ ಅಕ್ಷರಗಳ ಕ್ರಮಬದ್ಧ ಜೋಡಣೆಗೆ 'ವರ್ಣಮಾಲೆ'
ಎಂದು ಹೆಸರು.

ವರ್ಣಮಾಲೆಯಲ್ಲಿ ಪ್ರಮುಖವಾಗಿ ೩ ವಿಧಗಳು

೧) ಸ್ವರಗಳು ೨) ವ್ಯಂಜನಗಳು ೩) ಯೋಗವಾಹಗಳು

೧) ಸ್ವರಗಳು: ಸ್ವತಂತ್ರವಾಗಿ ಉಚ್ಚರಿಸಲಾಗುವ ಅಕ್ಷರಗಳು ಸ್ವರಗಳು.
ಒಟ್ಟು ಸ್ವರಗಳು : ೧೩(13)

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

೨) ವ್ಯಂಜನಗಳು : ಸ್ವರಗಳ ಸಹಾಯದಿಂದ ಉಚ್ಚರಿಸಲಾಗುವ ಅಕ್ಷರಗಳು
ವ್ಯಂಜನಗಳು.

ವ್ಯಂಜನಗಳಲ್ಲಿ ಎರಡು ವಿಧ :

ಅ) ವರ್ಗೀಯ ವ್ಯಂಜನಗಳು

ಆ) ಅವರ್ಗೀಯ ವ್ಯಂಜನಗಳು

ಅ) ವರ್ಗೀಯ ವ್ಯಂಜನಗಳು:೨೫(25)

ಕ ಖ ಗ ಘ ಙ

ಚ ಛ ಜ ಝ ಞ

ಟ ಠ ಡ ಢ ಣ

ತ ಥ ದ ಧ ನ

ಪ ಫ ಬ ಭ ಮ

ಆ) ಅವರ್ಗೀಯ ವ್ಯಂಜನಗಳು: ೯(9)

ಯ ರ ಲ ವ ಶ ಷ ಸ ಹ ಳ

೩) ಯೋಗವಾಹಗಳು: ೨(2)

ಬೇರೆ ಅಕ್ಷರಗಳ ಜೊತೆಯಲ್ಲಿ ಮಾತ್ರ ಉಚ್ಚರಿಸಬಹುದಾದ ಅಕ್ಷರ ಎಂದರ್ಥ.

ಅನುಸ್ವಾರ: ಅಂ. ವಿಸರ್ಗ: ಅಃ

---

## ಸಂಯುಕ್ತಾಕ್ಷರಗಳು

ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ
ಅಕ್ಷರವೇ ಸಂಯುಕ್ತಾಕ್ಷರ.

ಸಂಯುಕ್ತಾಕ್ಷರಗಳಲ್ಲಿ ಎರಡು ವಿಭಾಗಗಳಿವೆ.

೧.ಸಜಾತೀಯ ಸಂಯುಕ್ತಾಕ್ಷರಗಳು: ಒಂದೇ ಜಾತಿಯ ಎರಡು ವ್ಯಂಜನಗಳು
ಒಂದಕ್ಕೊಂದು ಸೇರಿದರೆ ಸಜಾತೀಯ ಸಂಯುಕ್ತಾಕ್ಷರಗಳಾಗುವುವು.

ಉದಾ: ಅಪ್ಪ, ಅಮ್ಮ, ಅಣ್ಣ, ಅಕ್ಕರ, ಅಕ್ಕಪಕ್ಕ, ರಕ್ಕಸ.

---

೨) ವಿಜಾತೀಯ ಸಂಯುಕ್ತಾಕ್ಷರಗಳು: ಬೇರೆ ಬೇರೆ ಜಾತಿಯ ಎರಡು ಅಥವಾ
ಹೆಚ್ಚು ವ್ಯಂಜನಗಳು ಒಂದಕೊಂದು ಕೂಡಿಕೊಂಡು ಉಂಟಾಗುವ ಅಕ್ಷರವು
ವಿಜಾತೀಯ ಸಂಯುಕ್ತಾಕ್ಷರಗಳು.

ಉದಾ: ಚಕ್ರ, ಆಜ್ಞೆ, ಸ್ತ್ರೀ, ವಸ್ತ್ರ.

---

## ವಚನಗಳು

ವಚನ ಎಂದರೆ ಸಂಖ್ಯೆ ಎಂದರ್ಥ.

ಕನ್ನಡದಲ್ಲಿ ವಚನಗಳು ಎರಡು

1.ಏಕವಚನ 2.ಬಹುವಚನ

1.ಏಕವಚನ : ಒಂದು ಎಂಬುದನ್ನು ಸೂಚಿಸುವ ಶಬ್ಧಗಳಿಗೆ ಏಕವಚನ ಎನ್ನುವರು.

2.ಬಹುವಚನ : ಒಂದಕಿಂತ ಹೆಚ್ಚು ಎಂದು ಸೂಚಿಸುವ ಶಬ್ಧಗಳಿಗೆ ಬಹುವಚನ ಎನ್ನುವರು.

| ಏಕವಚನ. | | ಬಹುವಚನ |
|---|---|---|
| 1.ಮನೆ. | - | ಮನೆಗಳು |
| 2.ಅರಸ. | - | ಅರಸರು |
| 3.ಮಗು. | - | ಮಕ್ಕಳು |
| 4.ಹುಡುಗ. | - | ಹುಡುಗರು |
| 5.ಶಾಲೆ. | - | ಶಾಲೆಗಳು |
| 6.ಮರ. | - | ಮರಗಳು |
| 7.ಅಕ್ಕ. | - | ಅಕ್ಕಂದಿರು |
| 8.ನಾಯಕ. | - | ನಾಯಕರು |

---

## ಲಿಂಗಗಳು

ವಸ್ತು, ಸ್ತ್ರೀ ಮತ್ತು ಪುರುಷರು ಎಂದು ಸೂಚಿಸಲು ಬಳಸುವ ಪದಗಳೇ ಲಿಂಗಗಳು.

ಲಿಂಗಗಳಲ್ಲಿ ೩(3) ವಿಧಗಳಿವೆ.

1.ಪುಲ್ಲಿಂಗ
2.ಸ್ತ್ರೀಲಿಂಗ
3.ನಪುಂಸಕ ಲಿಂಗ

1.ಪುಲ್ಲಿಂಗ : ಯಾವ ಶಬ್ಧ ಪ್ರಯೋಗ ಮಾಡಿದಾಗ ಪುರುಷ ಎಂಬ ಅರ್ಥ ಮನಸ್ಸಿಗೆ ಹೊಳೆದರೆ ಅದು ಪುಲ್ಲಿಂಗ.

ಉದಾ: ರಾಮ, ತಂದೆ, ಅಣ್ಣ.

---

2.ಸ್ತ್ರೀಲಿಂಗ : ಯಾವ ಶಬ್ಧ ಪ್ರಯೋಗ ಮಾಡಿದಾಗ ಸ್ತ್ರೀ ಎಂಬ ಅರ್ಥ ಮನಸ್ಸಿಗೆ ಹೊಳೆದರೆ ಅದು ಸ್ತ್ರೀಲಿಂಗ.

ಉದಾ: ತಾಯಿ, ಅತ್ತೆ, ರಾಣಿ.

---

3.ನಪುಂಸಕ ಲಿಂಗ: ಯಾವ ಶಬ್ಧ ಪ್ರಯೋಗ ಮಾಡಿದಾಗ ಪುರುಷ ಅಥವಾ ಸ್ತ್ರೀ ಅಲ್ಲದ ಅರ್ಥ ಮನಸ್ಸಿಗೆ ಹೊಳೆದರೆ ಅದು ನಪುಂಸಕ ಲಿಂಗ.

ಉದಾ: ಜನ, ಮರ, ಮಗು.

---

| ಪುಲ್ಲಿಂಗ. | | ಸ್ತ್ರೀಲಿಂಗ |
|---|---|---|
| 1.ರಾಜ. | - | ರಾಣಿ |
| 2.ತಂದೆ. | - | ತಾಯಿ |
| 3.ಹುಡುಗ. | - | ಹುಡುಗಿ |
| 4.ಗೆಳೆಯ. | - | ಗೆಳತಿ |
| 5.ಅಣ್ಣ. | - | ಅಕ್ಕ |
| 6.ಶಿಕ್ಷಕ. | - | ಶಿಕ್ಷಕಿ |
| 7.ಕುಮಾರ. | - | ಕುಮಾರಿ |
| 8.ನಟ. | - | ನಟಿ |

---

## ನಾಮಪದಗಳು

ವಸ್ತುವಾಚಕ ನಾಮಪದಗಳಲ್ಲಿ ಮುಖ್ಯವಾಗಿ ಮೂರು ವಿಧಗಳಿವೆ.

1.ರೂಢನಾಮ 2.ಅಂಕಿತನಾಮ. 3.ಅನ್ವರ್ಥನಾಮ

1.ರೂಢನಾಮ : ರೂಢಿಯಿಂದ ಬಂದ ಸಾಮಾನ್ಯ ವಾಚಕಗಳನ್ನು ರೂಢನಾಮ ಎನ್ನುವರು.
ಉದಾ: ನದಿ, ಪರ್ವತ, ಮನುಷ್ಯ , ದೇಶ, ಹುಡುಗಿ, ಶಾಲೆ.

---

2.ಅಂಕಿತನಾಮ : ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡ ಹೆಸರುಗಳೆಲ್ಲ ಅಂಕಿತನಾಮಗಳು.
ಉದಾ: ರಾಗಿಣಿ, ಬೆಂಗಳೂರು, ಕಾವೇರಿ, ಹಿಮಾಲಯ, ರಾಜು ಮುಂತಾದವು.

---

3.ಅನ್ವರ್ಥನಾಮ : ರೂಪ, ಗುಣ, ವೃತ್ತಿ ಸ್ವಭಾವಾದಿ ವಿಶೇಷವಾದ ಅರ್ಥಕ್ಕೆ ಅನುಗುಣವಾಗಿ ಇಟ್ಟ ಹೆಸರುಗಳೆಲ್ಲ ಅನ್ವರ್ಥನಾಮಗಳು.
ಉದಾ: ವ್ಯಾಪಾರಿ, ರೋಗಿ, ಶಿಕ್ಷಕಿ, ವೈದ್ಯ ಮುಂತಾದವು.

---